ಪಾಠ 5

# ಹೊಸ ಜೀವಿತ

# ಹೊಸ

# ಕಾರ್ಯಚಟುವಟಿಕೆಗಳು



**ಈ ಪಾಠದಲ್ಲಿ ನೀವು ಕಲಿಯುವ ಅಂಶಗಳು:**

ನಿಮ್ಮ ಸಮಯವನ್ನು ಯಾವ ರೀತಿಯಲ್ಲಿ ವಿನಿಯೋಗಿಸುತ್ತೀರಿ?

ನಿಮ್ಮ ಆಸಕ್ತಿಯು ಬದಲಾದಾಗ

ನಿಮ್ಮ ಹೊಸ ಆಸಕ್ತಿಗಳು

ಸಭಾ ಹಾಜರಿಯು

ಸತ್ಯವೇದ ಓದುವುದು

ಪ್ರಾರ್ಥನೆ: ಯಾವಾಗ ಪ್ರಾರ್ಥಿಸುವುದು

ಪ್ರಾರ್ಥನೆ: ಹೇಗೆ ಪ್ರಾರ್ಥಿಸುವಲುದು

ಸಾಕ್ಷಿ ಕೊಡುವುದು

ಕರ್ತನಿಗೆ ಸಂಗೀತಗಳನ್ನು ಹಾಡುವುದು

ಸುವಾರ್ತೆ ಸಾರುವುದು

ಕೊಡುವಿಕೆ

ನಿಮಗೆ ಸಾಧ್ಯವಾಗುವ ಹಾಗೆ ಸಹಾಯ ಮಾಡುವುದು

ಸಭಾ ಸಂಘಟನೆಯಲ್ಲಿ ಪಾಲುಗೊಳ್ಳುವಿಕೆ

ಮಿತಿಮೀರಿದ ಕಾರ್ಯಚಟುವಟಿಕೆಗಳು?



## ನಿಮ್ಮ ಸಮಯವನ್ನು ಯಾವ ರೀತಿಯಲ್ಲಿ ವಿನಿಯೋಗಿಸುತ್ತೀರಿ?

ಪ್ರತಿದಿನ ನೀವು ಕೆಲವು ಗಂಟೆಗಳನ್ನು ಕೆಲಸಕ್ಕಾಗಿ, ಊಟಕ್ಕಾಗಿ ಮತ್ತು ನಿದ್ರೆಗಾಗಿ ಕಳೆಯುತ್ತೀರಿ. ಆದರೆ ಉಳಿದ ಸಮಯವನ್ನು ಹೇಗೆ ಕಳೆಯುತ್ತೀರಿ? ಒಬ್ಬ ವ್ಯಕ್ತಿಯು ತನ್ನ ಉಳಿದ ಸಮಯದಲ್ಲಿ ಏನು ಮಾಡುತ್ತಾನೆಂಬುದು ಅವನ ಮತ್ತು ಅವನ ಕುಟುಂಬದ ಆಸಕ್ತಿಯ ಮೇಲೆ ಅವಲಂಬಿತವಾಗಿದೆ. ಕೆಲವರು ಎಲ್ಲಾ ಸಮಯದಲ್ಲಿ ಕೆಲಸ ಮಾಡುತ್ತಾರೆ ಮತ್ತು ಇತರರು ಆಟವಾಡುತ್ತಾರೆ. ಕೆಲವುರ ಸಭೆಗಳಿಗೆ ಹೋಗಿ ಅದರ ಕಾರ್ಯಚಟುವಟಿಕೆಗಳಲ್ಲಿ ಪಾಲುತೆಗೆದುಕೊಳ್ಳುತ್ತಾರೆ; ಇತರರಿಗೆ "ಅದಕ್ಕಾಗಿ ಸಮಯವೇ ಇಲ್ಲ"

ನೀವು ಮಾಡಬೇಕೆಂದಿರುವ ಸಂಗತಿಗಳಿಗೆಲ್ಲ ನಿಮಗೆ ಸಾಕಾದಷ್ಟು ಸಮಯವಿಲ್ಲದಿದ್ದರೂ ನಿಮಗೆ ಆಸಕ್ತಿಯನ್ನುಂಟುಮಾಡುವ ವಿಷಯಗಳಿಗೆಲ್ಲ ನೀವು ಸಮಯ ಮಾಡಿಕೊಂಡು ಮಾಡುತ್ತೀರಿ.

### ನೀವು ಮಾಡಬೇಕಾದದ್ದು

1. ನಿಮ್ಮ ಉಳಿದ ಸಮಯದಲ್ಲಿ ಮಾಡುವ ಕಾರ್ಯಚಟುವಟಿಕೆಗಳ ನಿರ್ಧಾರವು

...ಅ) ನಿಮ್ಮ ಮುಖ್ಯ ಆಸಕ್ತಿಯ ಮೇಲೆ ಇದೆ.

...ಆ) ಇತರರ ಹೇಳಿಕೆಯ ಮೇಲೆ ಇದೆ

...ಇ) ಅನುವಂಶಿಕವಾಗಿದೆ

**ಉತರ** : 1. ಅ) ನಿಮ್ಮ ಆಸಕ್ತಿಯ ಮೇಲೆ ಇದೆ.

## ನಿಮ್ಮ ಆಸಕ್ತಿಯು ಬದಲಾದಾಗ

ನೀವು ಬಾಲ್ಯದಲ್ಲಿದ್ದಾಗ ಇಷ್ಟಪಡುವ ಆಟಗಳನ್ನು ಈಗ ಆಡದೆ ನಿಮಗೆ ಈಗ ಆಸಕ್ತಿಯನ್ನುಂಟು ಮಾಡುವ ಸಂಗತಿಗಳಲ್ಲಿ ಮಗ್ನರಾಗಿರುತ್ತೀರಿ. ನಿಮ್ಮ ಆಸಕ್ತಿಯು ಬದಲಾದಂತೆ ನಿಮ್ಮ ಕಾರ್ಯಚಟುವಟಿಕೆಯು ಸಹ ಬದಲಾಗುವುದು.

'ಉತ್ತಮ ಸಮಯ' ಎಂದು ಹೇಳಿಕೊಂಡು ನಿಮ್ಮ ಆರೋಗ್ಯವನ್ನು ಕೆಡಿಸುವಂತಹ ಇಲ್ಲವೆ ಆತ್ಮಕ್ಕೆ ನೋವನ್ನುಂಟು ಮಾಡುವಂತಹ ಸಂಗತಿಗಳಲ್ಲಿ ನೀವು ನಿರಾಸಕ್ತರಾಗಿರುವುದನ್ನು ನೋಡುವ ನಿಮ್ಮ ಹಳೆಯ ಸ್ನೇಹಿತರು ಚಕಿತರಾಗುತ್ತಾರೆ. ನೀವು ಆಳವಾದ ಸಂತೋಷದ, ಅತಿ ಯೋಗ್ಯವಾದ, ತೃಪ್ತಿಕರವಾದ ಕಾರ್ಯಚಟುವಟಿಕೆಗಳ ಜೀವಿತಕ್ಕೆ ಸೇರಿದ್ದೀರೆಂಬುದನ್ನು ಅವರು ತಿಳಿಯಲಾರರು.

ನಿಮಗೆ ತೃಪ್ತಿಯನ್ನುಂಟು ಮಾಡದ ವಿಷಯಗಳಿಗೆ ನೀವು ತಿರಿಗಿ ಹೋಗಬೇಕೋ? ಕಸದ ಬುಟ್ಟಿಯಲ್ಲಿ ಹಳಸಿದ ಊಟವನ್ನು ಮಾಡುತ್ತಿದ್ದವನು ಒಬ್ಬ ಐಶ್ವರ್ಯವಂತನ ಊಟದ ಮೇಜಿಗೆ ಪ್ರತಿದಿನ ಊಟಮಾಡಲು ಆಮಂತ್ರಿಸಲ್ಪಟ್ಟರೆ ಅವನು ತಿರಿಗಿ ಕಸದ ಬುಟ್ಟಿಗೆ ಹೋಗುವನೋ ಎಂದು ಆ ಮನುಷ್ಯನನ್ನು ಕೇಳಿರಿ.

### ನೀವು ಮಾಡಬೇಕಾದದ್ದು

2. ನೀವು ಯೇಸುವನ್ನು ನಿಮ್ಮ ರಕ್ಷಕನನ್ನಾಗಿ ಅಂಗೀಕರಿಸಿಕೊಂಡ ಮೇಲೆ ನಿಮ್ಮ ಆಸಕ್ತಿಗಳು ಬದಲಾಗಿವೆಯೋ?......
3. ನಿಮ್ಮ ಕಾರ್ಯಚಟುವಟಿಕೆಗಳು ಬದಲಾಗಿವೆಯೋ?.....

## ನಿಮ್ಮ ಹೊಸ ಆಸಕ್ತಿಗಳು

ನೀವು ದೇವರ ಮಗುವಾಗಿರುವುದರಿಂದ ನಿಮ್ಮಲ್ಲಿ ಹೊಸ ಆಸಕ್ತಿಗಳು ಇರುವವು. ಇವು ನಿಮ್ಮನ್ನು ಗುಂಪು ಕಾರ್ಯಚಟುವಟಿಕೆಗಳಿಗೂ ಮತ್ತು ವೈಯಕ್ತಿಕ ಜವಾಬ್ದಾರಿಕೆಗಳಿಗೂ ನಡೆಸುತ್ತವೆ. ನೀವು ಮೊದಲು ಮಾಡುತ್ತಿದ್ದ ಕಾರ್ಯಗಳನ್ನು ಈಗಲೂ ಮಾಡುತ್ತೀರಿ-ಕೆಲಸ, ಊಟ, ನಿದ್ರೆ ಮತ್ತು ಮನೆಯ ಕೆಲಸಗಳು. ಆದರೆ ನಿಮ್ಮ ನಿಜ ಜೀವಿತವು ಹೊಸ ಆಸಕ್ತಿಯ ಮೇಲೆಯೇ ಕೇಂದ್ರೀಕೃತವಾಗಿರುತ್ತದೆ.

ಇವೆಲ್ಲವುಗಳಿಗಿಂತ, ನೀವು ಒಬ್ಬ ವ್ಯಕ್ತಿಯನ್ನು ಪ್ರೀತಿಸುವಾಗ ನೀವು ಅವನೊಂದಿಗೆ ಇರಲು ಮತ್ತು ಮೆಚ್ಚಿಸಲು ಬಯಸುತ್ತೀರಿ. ನೀವು ಈಗ ದೇವರನ್ನು ಪ್ರೀತಿಸುವುದರಿಂದ ನೀವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಆತನೊಂದಿಗೆ ಇರ್ರಿ ಮತ್ತು ಆತನನ್ನು ಮೆಚ್ಚಿಸಿರಿ.

**ನೀವು ಮಾಡಬೇಕಾದದ್ದು**

4. ಒಬ್ಬ ದೇವರ ಮಗುವಿನ ಮುಖ್ಯ ಆಸಕ್ತಿಯು

...ಅ) ಹಣ ಸಂಪಾದಿಸಲು ಯತ್ನ

...ಆ) ಸ್ವಸಂತೋಷ

...ಇ) ತನ್ನ ಸ್ವರ್ಗದ ತಂದೆಯೊಂದಿಗೆ ಸಮಯ ಕಳೆಯುವುದು ಮತ್ತು ಆತನು ಮೆಚ್ಚುವಂತವುಗಳನ್ನು ಮಾಡುವುದು.

**ಉತ್ತರ**: 4ಇ) ತನ್ನ ಸ್ವರ್ಗದ ತಂದೆಯೊಂದಿಗೆ ಸಮಯ ಕಳೆಯುವುದು ಮತ್ತು ಆತನು ಮೆಚ್ಚುವಂತವುಗಳನ್ನು ಮಾಡುವುದು.

ನಮ್ಮ ಸ್ವರ್ಗದ ತಂದೆಯು ಭೂಲೋಕದ ಮೇಲೆ ಸ್ಥಾಪಿಸಬೇಕೆಂದಿರುವ ರಾಜ್ಯವನ್ನು ಕುರಿತು ನಾವು ಉತ್ಸಾಹಿತರಾಗಿದ್ದೇವೆ. ನಾವು ಮಾಡಬೇಕೆಂದು ಆತನು ಒಂದೊಂದೆ ಕಾರ್ಯಗಳನ್ನು ಇಟ್ಟಿದ್ದಾನೆ. ಯೇಸುಕ್ರಿಸ್ತನು ದೇಶಗಳ ಮೇಲೆ ನೀತಿ ಮತ್ತು ಶಾಂತಿಯ ಆಳ್ವಿಕೆಯನ್ನು ಮಾಡುವದಕ್ಕಿದ್ದಾನೆ ಎಂಬುದರ ಕುರಿತು ನಾವು ಒಟ್ಟಾಗಿ ಅದಕ್ಕಾಗಿ ಸಿದ್ದರಾಗುತ್ತಿದ್ದೇವೆ.

**ನೀವು ಮಾಡಬೇಕಾದದ್ದು**

5. ಯೇಸುವಿನ ಬರುವಿಕೆಗಾಗಿ ನೀವು ಸಂಗತಿಗಳನ್ನು ಸಿದ್ಧಪಡಿಸಲು ಸಹಾಯ ಮಾಡಬೇಕೆಂದು ದೇವರು ನಿಮ್ಮನ್ನು ಎದುರುನೋಡುತ್ತಿದ್ದಾನೆ ಎಂಬುದರ ಕುರಿತು ನಿಮ್ಮ ಅನಿಸುವಿಕೆಯೇನು?

...ಅ) ಇಂತಹ ಗೌರವ ಮತ್ತು ಅವಕಾಶಕ್ಕಾಗಿ ಸಂತೋಷವಾಗುತ್ತದೆ.

...ಆ) ದೇವರಿಗಾಗಿ ಮಾಡಬೇಕಾದುದರ ಕುರಿತು ದುಃಖವಾಗುತ್ತದೆ.

6. ಪ್ರಶ್ನೆ 5ಕ್ಕೆ ನಿಮ್ಮ ಉತ್ತರ "ಅ)" ಆಗಿದ್ದರೆ, ಆತನ ಕೆಲಸ ಮತ್ತು ರಾಜ್ಯದಲ್ಲಿ ಇಂತಹ ಅವಕಾಶವಿರುವುದಕ್ಕಾಗಿ ದೇವರನ್ನು ಸ್ತುತಿಸಿರಿ. ಒಂದು ವೇಳೆ ನಿಮ್ಮ ಉತ್ತರ "ಆ" ಆಗಿದ್ದರೆ, ನೀವು ಅದರ ಕುರಿತು ಪ್ರಾರ್ಥಿಸಬೇಕೆಂದು ಸಲಹೆ ಕೊಡುತ್ತೇವೆ.

ದೇವರ ರಾಜ್ಯದಲ್ಲಿ ನಿಮ್ಮ ಹೊಸ ಆಸಕ್ತಿಯು ನಿಮ್ಮನ್ನು ತಲ್ಲೀನರಾಗಿಯೂ ಮತ್ತು ಸಂತೋಷವಾಗಿಯು ಇಡುತ್ತದೆ. ಇಲ್ಲಿ ಕೆಲವು ಕಾರ್ಯ ಚಟುವಟಿಕೆಗಳು ನಿಮಗೆ ಹೊಸ ಉದ್ದೇಶ ಮತ್ತು ಜೀವಿತಕ್ಕೆ ಅರ್ಥವನ್ನು ಕೊಡುತ್ತವೆ.

## ಸಭಾ ಹಾಜರಿಯು

ದೇವರ ಕುಟುಂಬದಲ್ಲಿ ಸಂಘಟಿತ ಸಭೆಗಳಿವೆ. ಶಿಷ್ಯರು ಪ್ರತಿ ವಿಭಾಗಗಳಲ್ಲಿ ದೇವರನ್ನು ಆರಾಧಿಸಲು ಕ್ರಮವಾಗಿ ಕೂಡಿಬರುತ್ತಾರೆ. ಪ್ರತಿಯೊಂದು ವಿಭಾಗಗಳಲ್ಲಿ ಶಿಷ್ಯರು ದೇವರನ್ನು ಆರಾಧಿಸಲು, ಆತ್ಮೀಕವಾಗಿ ಒಬ್ಬರಿಗೊಬ್ಬರು ಸಹಾಯಮಾಡಲು ಮತ್ತು ದೇವರು ತಮಗೆ ಕೊಟ್ಟ ಕೆಲಸವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಕೂಡಿ ಬರುತ್ತಾರೆ.

ಈ ರೀತಿಯ ಕೂಟಗಳು ಇಲ್ಲವೆ ಕಾರ್ಯಚಟುವಟಿಕೆಗಳು ಒಂದು ಮನೆಯಲ್ಲಾಗಲಿ ಅಥವಾ ದೇವರಿಗೆಂದು ಪ್ರತಿಷ್ಠಿಸಿದ ಸಭಾ ಭವನದಲ್ಲಾಗಲಿ ಆಗುತ್ತವೆ. ಈ ಕೂಟಗಳಿಗೆ ನೀವು ಪದೇ ಪದೇ ಹೋಗುವುದಲ್ಲದೆ, ಸುವಾರ್ತೆಯನ್ನು ಕೇಳಲು ನಿಮ್ಮ ಸ್ನೇಹಿತರನ್ನು ಸಹ ಕರೆದುಕೊಂಡು ಹೋಗಿರಿ. ನೀವು ಕರ್ತನಲ್ಲಿರುವ ಸಹೋದರರ ಮತ್ತು ಸಹೋದರಿಯರ ಅನ್ಯೋನತೆಯಲ್ಲಿಯು ಮತ್ತು ಎಲ್ಲದಕ್ಕಿಂತ ಮೇಲಾಗಿ ಕರ್ತನ ಸಾನಿಧ್ಯಕ್ಕೆ ಬಂದು ಆತನನ್ನು ಸಂಧಿಸುವುದು ಹೆಚ್ಚಿನ ಸಂತೋಷವನ್ನು ಕೊಡುವುದು.

ನೀವು ಆದಷ್ಟು ಬೇಗನೆ ದೇವರಿಗೆ ಸೇವೆ ಸಲ್ಲಿಸುವ ಮತ್ತು ಸುವಾರ್ತೆ ಸಾರುವ ಸಭೆಗೆ ಸದಸ್ಯರಾಗಿರಿ. ಅದರ ಕಾರ್ಯಕ್ರಮಗಳಲ್ಲಿ ಪಾಲುತೆಗೆದುಕೊಳ್ಳಿರಿ ಮತ್ತು ಅದರ ಪ್ರಯೋಜನತೆಯಲ್ಲಿ ಮತ್ತು ಆಶೀರ್ವಾದಗಳಲ್ಲಿ, ಸಂತೋಷಿಸಿರಿ. ನೀವು ಒಬ್ಬ ಉತ್ತಮ ಸದಸ್ಯನಾಗುವಂತೆ ಈ ಪಾಠಗಳು ನಿಮಗೆ ಸಹಾಯ ಮಾಡುತ್ತವೆ.

## ನೀವು ಮಾಡಬೇಕಾದದ್ದು

7. ನೀವು ದೇವರಿಗಾಗಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಿದ್ದರೆ ಮತ್ತು ಇತರ ವಿಶ್ವಾಸಿಗಳ ಅನ್ಯೋನ್ಯತೆಯಲ್ಲಿ ಆಶೀರ್ವಾದದಲ್ಲಿ ಸಂತೋಷಿಸಬೇಕಿದ್ದರೆ ನೀವು ಮಾಡಬೇಕಾದದ್ದು

...ಅ) ಸಂಘಟಿತ ಸಭೆಗಳಿಂದ ದೂರವಿರ್ರಿ.

...ಆ) ಸಭೆಗೆ ಹೋಗಿರಿ ಆದರೆ ಸದಸ್ಯರಾಗದಿರಿ.

...ಇ) ಒಳ್ಳೆಯ ಸಭೆಯ ಸದಸ್ಯರಾಗಿ ಅದರ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಳ್ಳಿರಿ.

**ಉತ್ತರ** : 7ಇ) ಒಳ್ಳೆಯ ಸಭೆಯ ಸದಸ್ಯರಾಗಿ ಅದರ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಳ್ಳಿರಿ.

ಒಂದು ವೇಳೆ ಒಂದು ದಿನ ಬೋಧಕನಾಗಲಿ ಇಲ್ಲವೇ ಇನ್ನೊಬ್ಬ ಶಿಷ್ಯನಾಗಲಿ ತಾನು ಹೇಳಿದ್ದನ್ನು ಹೇಳಬೇಕೆಂದು ಹೇಳದೆ ನಿಮ್ಮ ಮನ ನೋಯಿಸಿದರೆ ಏನಾಗುವುದು? ಸ್ವಾಭಾವಿಕವಾಗಿ ಒಂದು ಕುಟುಂಬದಲ್ಲಿ ಒಂದು ಮಗುವು ಇನ್ನೊಂದರ ಮನ ನೋಯಿಸಿದರೆ ಅದು ಮನೆಯನ್ನು ಬಿಟ್ಟು ಹೋಗದು. ಆ ಸಭೆಯಲ್ಲಿ ಇಂತಹ ಸಂಗತಿ ಆದಾಗ ಕೆಲವು ಶಿಷ್ಯರು "ಆತನು ನನ್ನ ಮನ ನೋಯಿಸಿದ್ದಾನೆ ಇನ್ನು ಮುಂದೆ ಸಭೆಗೆ ನಾವು ಹೋಗುವುದಿಲ್ಲ, ನಾನು ಮನೆಯಲ್ಲಿಯೇ ದೇವರನ್ನು ಆರಾಧಿಸುತ್ತೇವೆ" ಎಂದು ಹೇಳುತ್ತಾರೆ. ಎಚ್ಚರದಿಂದಿರಿ ಸೈತಾನನು ಶಿಷ್ಯನನ್ನು ಬಲಹೀನನ್ನಾಗಿ ಮಾಡಲು ಮತ್ತು ಕರ್ತನಿಂದ ದೂರವಿಡಲು ಉಪಯೋಗಿಸುವ ಮೆಚ್ಚಿಕೆಯುಳ್ಳ ಚಮತ್ಕಾರವಾಗಿದೆ.

ನೆನಪಿನಲ್ಲಿಡಿ ನಿಮ್ಮ ತಂದೆಯು ತನ್ನ ಮಕ್ಕಳು ತನ್ನ ಮನೆಯಲ್ಲಿಯೇ ಕೂಡಿಬರುವುದನ್ನು ಅಪೇಕ್ಷಿಸುತ್ತಾನೆಂದು. ಕಟ್ಟಡವು ದೀನತೆಯಲ್ಲಿರಬಹುದು ಮತ್ತು ಅಲ್ಲಿ ನಡೆಯುವ ಎಲ್ಲ ಕಾರ್ಯಗಳು ನಿಮಗೆ ಒಪ್ಪಿಗೆಯಿಲ್ಲದಿರಬಹುದು. ಆದರ ನೀವು ಕರ್ತನಲ್ಲಿ ನಿಮ್ಮ ಸಹೋದರರು ಮತ್ತು ಸಹೋದರಿಯರೊಂದಿಗೆ ಕೂಡಿ ಬಂದು ನಿಮ್ಮ ತಂದೆಯು ನಿಮ್ಮ ಆತ್ಮಕ್ಕಾಗಿ ಸಿದ್ಧಪಡಿಸಿದ ಆಹಾರವನ್ನು ಸೇವಿಸುವುದು ಅವಶ್ಯವಾಗಿದೆ.

ಇಬ್ರಿಯರಿಗೆ 10:25 ಸಭೆಯಾಗಿ ಕೂಡಿಕೊಳ್ಳುವುದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ

### ನೀವು ಮಾಡಬೇಕಾದದ್ದು

8. ಒಂದು ವೇಳೆ ಬೋಧಕರು ಹೇಳಿದ್ದು ನಿಮ್ಮ ಮನಸ್ಸಿಗೆ ನೋವಾಗಿದ್ದರೆ, ನೀವು ಮಾಡಬೇಕಾದದ್ದು

   ...ಅ) ಸಭೆಗೆ ಹೋಗುವುದನ್ನು ನಿಲ್ಲಿಸಬೇಕು.

   ...ಆ) ಇನ್ನೊಬ್ಬ ಬೋಧಕನಿಗಾಗಿ ಪ್ರಯತ್ನ ಮಾಡಿರಿ.

   ...ಇ) ಆತನನ್ನು ಕ್ಷಮಿಸಿರಿ ಮತ್ತು ಸಭೆಯ ಕಾರ್ಯ ಕಲಾಪಗಳಿಗೆ ಹಾಜರಾಗಿರಿ

9. ಇಬ್ರಿಯರಿಗೆ 10:25 ಬಾಯಿ ಪಾಠ ಮಾಡಿರಿ

ಉತ್ತರ 8ಇ) ಆತನನ್ನು ಕ್ಷಮಿಸಿರಿ ಮತ್ತು ಸಭೆಯ ಕಾರ್ಯ ಕಲಾಪಗಳಿಗೆ ಹಾಜರಾಗಿರಿ.

---

## ಸತ್ಯವೇದ ಓದುವುದು

---

ಪ್ರತಿದಿನ ಸತ್ಯವೇದ ಓದುವುದು ಪ್ರಾಮುಖ್ಯತೆಯನ್ನು ಕುರಿತು ನಾವು ಈಗಾಗಲೇ ತಿಳಿಸಿದ್ದೇವೆ. ಪ್ರತಿದಿನ ಸತ್ಯವೇದ ಓದುವುದಕ್ಕಾಗಿ ಮತ್ತು ಪ್ರಾರ್ಥಿಸುವುದಕ್ಕಾಗಿ ನಿಮ್ಮೊಂದಿಗೆ ನಿಮ್ಮ ಕುಟುಂಬದ ಇತರ ಸದಸ್ಯರನ್ನು ಕೂಡಿಸಲು ಸಾಧ್ಯವೋ? ಇದಕ್ಕೆ ನಾವು ಕುಟುಂಬ ವೇದಿಕೆ ಅಥವಾ ಕುಟುಂಬ ಭಕ್ತಿಯೆನ್ನುತ್ತೇವೆ. ಇದು ನಿಮ್ಮ ಮನೆಗೆ ನಿಜವಾಗಲೂ ಆಶೀರ್ವಾದದಾಯಕವಾಗಿದೆ. ದೇವರ ವಾಕ್ಯವು ನಿಮಗೆ ಮಾರ್ಗದರ್ಶನ ಕೊಡುತ್ತದೆ ಮತ್ತು ಆ ದಿನಕ್ಕಾಗಿ ಬೇಕಾದ ಬಲವನ್ನು ಕೊಡುತ್ತದೆ. ಈ ಕುಟುಂಬ ವೇದಿಕೆಯಲ್ಲಿ ನೀವೆಲ್ಲರು ಕೂಡಿಕೊಂಡು ಕುಟುಂಬದ ಸದಸ್ಯರ ಸಮಸ್ಯೆ ಮತ್ತು ಅಗತ್ಯತೆಗಳಿಗಾಗಿ ಪ್ರಾರ್ಥಿಸಿರಿ.

10. 'ಕುಟುಂಬ ಭಕ್ತಿ' ಅಥವಾ 'ಕುಟುಂಬ ವೇದಿಕೆ' ಎಂದರೆ

...ಅ) ಸಭೆಯ ಕೂಟಕ್ಕೆ ಕುಟುಂಬದವರು ಮಾತ್ರ ಹಾಜರಾಗುವುದು.

...ಆ) ಮನೆಯಲ್ಲಿ ಕುಟುಂಬದವರೆಲ್ಲ ಕೂಡಿಕೊಂಡು ಸತ್ಯವೇದ ಓದುವುದು ಮತ್ತು ಪ್ರಾರ್ಥಿಸುವುದು

**ಉತ್ತರ** : 10ಆ) ಮನೆಯಲ್ಲಿ ಕುಟುಂಬದವರೆಲ್ಲ ಕೂಡಿಕೊಂಡು ಸತ್ಯವೇದ ಓದುವುದು ಮತ್ತು ಪ್ರಾರ್ಥಿಸುವುದು.

**ಪ್ರಾರ್ಥನೆ : ಯಾವಾಗ ಪ್ರಾರ್ಥಿಸುವುದು**

ಶಿಷ್ಯನು ಮಾಡಬೇಕಾದ ಪ್ರಾಮುಖ್ಯವಾದ ಸಂಗತಿಯೇನೆಂದರೆ ಪ್ರಾರ್ಥಿಸುವುದು. ನೀವು ಪ್ರಾರ್ಥಿಸುವಾಗ ದೇವರು ಉತ್ತರಿಸುವನು. ನೀವು ದೇವರೊಂದಿಗೆ ಕೆಲಸ ಮಾಡುತ್ತಿದ್ದೀರಿ. ಆದ್ದರಿಂದ ಪ್ರಾರ್ಥಿಸಲು ಸಮಯ ಮಾಡಿಕೊಳ್ಳಿರಿ. ನೀವು ಬೆಳಿಗ್ಗೆ ಏಳುವಾಗ ದೇವರೊಂದಿಗೆ ಸಮಯ ಕಳೆಯಿರಿ ಮತ್ತು ದಿನದ ಸಮಸ್ಯೆಗಳನ್ನು ಎದುರಿಸಲು ನೀವು ಶಾರೀರಿಕ, ಮಾನಸಿಕ ಮತ್ತು ಆತ್ಮೀಕ ಬಲವನ್ನು ಹೊಂದುವಿರಿ.

* ನಿಮ್ಮ ಆಹಾರಕ್ಕಾಗಿ ದೇವರನ್ನು ಸ್ತುತಿಸಿರಿ
* ಪ್ರತಿದಿನ ಕುಟುಂಬ ಪ್ರಾರ್ಥನೆ ಮಾಡಿರಿ

ಸಭೆಯಲ್ಲಿ ನಡೆಯುವ ಕೂಟದಲ್ಲಾಗಲಿ ಅದರ ಮೊದಲಾಗಲಿ ಇಲ್ಲವೆ ನಂತರದಲ್ಲಾಗಲಿ ಸಿಕ್ಕುವ ಪ್ರಾರ್ಥನಾ ಸದಾವಕಾಶಗಳನ್ನು ಉಪಯೋಗಿಸಿರಿ. ದೇವರು ಹೇಳುತ್ತಾನೆ: "ನನ್ನ ಮನೆಯು ಪ್ರಾರ್ಥನಾಲಯವೆನಿಸಿಕೊಳ್ಳುವುದು"

* ಯಾವ ಸಮಯದಲ್ಲಾದರೂ ನಿಮ್ಮ ಹೃದಯವನ್ನೆತ್ತಿ ಆತನ ಆಶೀರ್ವಾದಗಳಿಗಾಗಿ ಸ್ತುತಿಸಿರಿ ಮತ್ತು ಆತನ ಸಹಾಯಕ್ಕಾಗಿ ಬೇಡಿಕೊಳ್ಳಿರಿ, ನಿಮ್ಮ ತಂದೆಯೊಡನೆ ಮಾತಾಡಲು ಯಾವಾಗಲೂ ಮಾತುಗಳನ್ನು ಉಪಯೋಗಿಸುವುದು ಬೇಕಿಲ್ಲ, ಆತನಿಗೆ ನಿಮ್ಮ ಯೋಚನೆಗಳು ಗೋಚರವಾಗಿವೆ.
* ನೀವು ಮಲಗುವ ಮುಂಚಿತ ದೇವರು ಆ ದಿನದಲ್ಲಿ ಕಾಪಾಡಿದ್ದಕ್ಕಾಗಿ ಆತನನ್ನು ಸ್ತುತಿಸಿರಿ. ಯಾವುದೇ ತಪ್ಪು ಮಾಡಿದ್ದರೂ ಅದಕ್ಕಾಗಿ ಆತನ ಕ್ಷಮೆ ಕೇಳಿರಿ ಮತ್ತು ನಿಮ್ಮನ್ನು ಆತನ ಕಾಪಾಡುವಿಕೆಗೆ ಒಪ್ಪಿಸಿಕೊಡಿರಿ.

11. ನೀವು ಪ್ರಾರ್ಥಿಸಬೇಕಾದದ್ದು
...ಅ) ಸಭೆಯಲ್ಲಿ ಮಾತ್ರ
...ಆ) ಯಾವುದೇ ಸಮಯ

ಉತ್ತರ : 11ಆ) ಯಾವುದೇ ಸಮಯ

---

**ಪ್ರಾರ್ಥನೆ : ಹೇಗೆ ಪ್ರಾರ್ಥಿಸುವುದು**

---

ನಿಮಗೆ ನೀವೇ ಹೇಳಿಕೊಳ್ಳಬಹುದು "ಆದರೆ ನನಗೆ ಪ್ರಾರ್ಥಿಸುವುದು ಹೇಗೆ ಎಂದು ಗೊತ್ತಿಲ್ಲ." ಅದು ಕಷ್ಟಕರವಲ್ಲ ನಿಮ್ಮ ಸ್ನೇಹಿತರೊಂದಿಗೆ ಮಾತಾಡಿದ ಹಾಗೆ ದೇವರೊಡನೆ ಮಾತಾಡಿರಿ. ಪವಿತ್ರಾತ್ಮನು ನಿಮಗೆ ಸಹಾಯ ಮಾಡುವನು.

ದೇವರು ನಿಮಗಾಗಿ ಮಾಡಿದ್ದೆಲ್ಲದರ ಕುರಿತು ಯೋಚಿಸಿ ಆತನ ಆಶೀರ್ವಾದಗಳಿಗಾಗಿ ಆತನನ್ನು ಸ್ತುತಿಸಿರಿ. ನಿಮ್ಮ ಮತ್ತು ನಿಮಗೆ ಪ್ರಿಯವಾದವರ ಅಗತ್ಯತೆಗಳನ್ನು ಆತನು ಪೂರೈಸುವಂತೆ ಬೇಡಿಕೊಳ್ಳಿರಿ. ನಿಮ್ಮ ಸ್ನೇಹಿತರ ಮತ್ತು ಸಂಬಂಧಿಕರ ರಕ್ಷಣೆಗಾಗಿ ಪ್ರಾರ್ಥಿಸಿರಿ. ನಿಮ್ಮ ಬೋಧಕರಿಗಾಗಿ, ಸಭೆಗಾಗಿ, ಕ್ರಿಸ್ತನಲ್ಲಿರುವ ನಿಮ್ಮ ಸಹೋದರರು ಮತ್ತು ಸಹೋದರಿಯರಿಗಾಗಿ ಮತ್ತು ಲೋಕದಂತ್ಯ ನಡೆಯುವ ದೇವರ ಸೇವೆಗಾಗಿ ಪ್ರಾರ್ಥಿಸಿರಿ. ಹೊಸ ಶಿಷ್ಯರಿಗಾಗಿ ಮತ್ತು ಅವರ ಸಮಸ್ಯೆಗಳಿಗಾಗಿ ಪ್ರಾರ್ಥಿಸಿರಿ. ನಿಮ್ಮ ದೇಶಕ್ಕಾಗಿ ಪ್ರಾರ್ಥಿಸಿರಿ. ಪ್ರಾರ್ಥಿಸಲು ಪ್ರಾರಂಭಿಸಿರಿ. ನಂತರ ಬಹುಬೇಗನೆ ಅದು ಹೇಗೆಂದು ಕಲಿಯುವಿರಿ.

ಯೇಸು ನಮಗೊಂದು ವಿಧಾನವನ್ನು ಕೊಟ್ಟಿದ್ದಾನೆ. ನೀವು ಅದನ್ನು ಬಾಯಿಪಾಠ ಮಾಡಿರಿ ಮತ್ತು ಪ್ರಾರ್ಥನೆಯಲ್ಲಿ ಉಪಯೋಗಿಸಿರಿ.

ಮತ್ತಾಯ 6:10-13 ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇ

ರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತು ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು.

## ನೀವು ಮಾಡಬೇಕಾದದ್ದು

12. ಕರ್ತನು ಹೇಳಿಕೊಟ್ಟ ಪ್ರಾರ್ಥನೆಯನ್ನು ಬಾಯಿಪಾಠ ಮಾಡಿರಿ

## ಸಾಕ್ಷಿ ಕೊಡುವುದು

ಇದರ ಅರ್ಥವೇನೆಂದರೆ ದೇವರು ನಿಮಗಾಗಿ ಮಾಡಿದ್ದನ್ನು ಇತರರಿಗೆ ತಿಳಿಸುವುದು. ನೀವು ಇದನ್ನು ಮನೆಯಲ್ಲಾಗಲಿ, ಬಸ್ಸಿನಲ್ಲಾಗಲಿ, ಸಭೆಯ ಕೂಟಗಳಲ್ಲಾಗಲಿ ಇಲ್ಲವೆ ಪತ್ರದಿಂದಾಗಲಿ ಮಾಡಬಹುದು. ನಿಮಗೆ ಇತರರು ಕ್ರಿಸ್ತನ ಕುರಿತು ತಿಳಿಸಿದಂತೆ, ನೀವು ನಿಮ್ಮ ಸ್ನೇಹಿತರಿಗೆ ಮತ್ತು ಸಂಬಂಧಿಕರಿಗೆ ತಿಳಿಸಿರಿ. ಅವರು ಕರ್ತನಾದ ಯೇಸು ಕ್ರಿಸ್ತನನ್ನು ಅಂಗೀಕರಿಸುವಂತೆ ಪ್ರಾರ್ಥಿಸಿರಿ.

ಕ್ರಿಸ್ತನಲ್ಲಿರುವ ನಮ್ಮ ನಂಬಿಕೆಯ ಕುರಿತು ಬಹಿರಂಗವಾಗಿ ಹೇಳುವುದು ಅಗತ್ಯವೆಂದು ಸತ್ಯವೇದವು ಒತ್ತಿ ಹೇಳುತ್ತದೆ. ಯಾಕೆಂದರೆ ಇತರರು ಆತನು ನಮ್ಮ ರಕ್ಷಕನೆಂದು ತಿಳಿಯಲೆಂದು. ಕ್ರಿಸ್ತನು ಹೇಳಿದ್ದು: “ನೀವು ನನ್ನ ಸಾಕ್ಷಿಗಳಾಗುವಿರಿ.” ನಿಮಗೆ ಧೈರ್ಯಬೇಕಾದಲ್ಲಿ ದೇವರನ್ನು ಕೇಳಿರಿ ಆತನು ಅದನ್ನು ನಿಮಗೆ ಕೊಡುವನು. ನಿಮ್ಮಂತೆಯೇ ಸಾವಿರಾರು ಜನರು ಸಾಕ್ಷಿ ಕೊಡಲು ಭಯಪಟ್ಟರು. ಆದರೆ ಅವರು ಕ್ರಿಸ್ತನಿಗಾಗಿ ಸಾಕ್ಷಿಕೊಡುವುದರ ಮೂಲಕ ಭಯದ ಮೇಲೆ ಜಯವನ್ನು, ಶ್ರೇಷ್ಠ ಆಶೀರ್ವಾದವನ್ನು ಮತ್ತು ಹೊಸ ಬಲವನ್ನು ಕಂಡುಕೊಂಡರು. ಕರ್ತನಾದ ಯೇಸು ಹೇಳಿದ್ದೇನೆಂದರೆ:

ಮತ್ತಾಯ 10:32 “ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು.

ಮಾರ್ಕ 8:38 “ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು, ತಾನು ತನ್ನ ತಂದೆಯ ಪ್ರಭಾ

ವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವೆನು ಅಂದನು".

**ನೀವು ಮಾಡಬೇಕಾದದ್ದು**

13. ದೇವರು ತನ್ನ ಮಕ್ಕಳಿಂದ ಅಪೇಕ್ಷಿಸುವುದು
   ...ಅ) ತಾನು ಅವರಿಗಾಗಿ ಮಾಡಿದುದರ ಕುರಿತು ಮೌನವಾಗಿರಬೇಕೆಂದು
   ...ಆ) ತಾನು ಅವರಿಗಾಗಿ ಮಾಡಿದುದರ ಕುರಿತು ಇತರರಿಗೆ ತಿಳಿಸಬೇಕೆಂದು

**ಉತ್ತರ** : 13ಆ) ತಾನು ಅವರಿಗಾಗಿ ಮಾಡಿದುದರ ಕುರಿತು ಇತರರಿಗೆ ತಿಳಿಸಬೇಕೆಂದು

## ಕರ್ತನಿಗೆ ಸಂಗೀತಗಳನ್ನು ಹಾಡುವುದು

ಮನೆಯಲ್ಲಾಗಲಿ, ಸಭೆಯಲ್ಲಾಗಲಿ ನಿಮ್ಮ ಸಂಗೀತಗಳು ನಿಮ್ಮನ್ನು ಮತ್ತು ಇತರರನ್ನು ಪ್ರೋತ್ಸಾಹಿಸಲು ಮತ್ತು ಆಶೀರ್ವಾದಕ್ಕೆ ಸಹಾಯವಾಗಿವೆ. ಹಾಡಲು ಸ್ವರವು ಮುಖ್ಯವಲ್ಲ, ಆದರೆ ದೇವರನ್ನು ಹೃದಯದಿಂದ ಸ್ತುತಿಸುವುದೆ ಅವಶ್ಯವಾದದ್ದು.

ಕೊಲೊಸ್ಸೆ 3:16 ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನಮಾಡಿರಿ.

**ನೀವು ಮಾಡಬೇಕಾದದ್ದು**

14. ಹಾಡುವುದಕ್ಕೆ ಪ್ರಾಮುಖ್ಯವಾಗಿ ಬೇಕಾದದ್ದು
   ...ಅ) ವ್ಯಕ್ತಿಗೆ ಹಾಡಲು ಉತ್ತಮ ಸ್ವರವಿರಬೇಕು.
   ...ಆ) ಆತನು ಸಭೆಯಲ್ಲಿ ಹಾಡಬೇಕು
   ...ಇ) ಆತನು ದೇವರ ಮಹಿಮೆಗಾಗಿ ಹೃದಯಪೂರ್ವಕವಾಗಿ ಹಾಡಬೇಕು.

**ಉತ್ತರ** : 14ಇ) ಆತನು ದೇವರ ಮಹಿಮೆಗಾಗಿ ಹೃದಯಪೂರ್ವಕವಾಗಿ ಹಾಡಬೇಕು.

## ಸುವಾರ್ತೆ ಸಾರುವುದು

ಇದು ಸಭೆಯ ಪ್ರಾಮುಖ್ಯವಾದ ಕಾರ್ಯಕ್ರಮ. ಈ ಕೆಲಸಕ್ಕಾಗಿ ಕೆಲವರು ಪೂರ್ಣಾವಧಿಯಾಗಿ ದೇವರ ಸೇವೆ ಮಾಡುತ್ತಾರೆ. ದೇವರು ಅವರಿಗೆ, ಬೋಧಕರ, ಸುವಾರ್ತಿಕರ ಮತ್ತು ಕಳುಹಿಸಲ್ಪಟ್ಟವರ ಜವಾಬ್ದಾರಿಕೆಗಳನ್ನು ಕೊಡುತ್ತಾನೆ.

## ಕೊಡುವಿಕೆ

ಸುವಾರ್ತೆ ಸಾರುವ ಕೆಲಸವು ದೇವರ ಇಡೀ ಕುಟುಂಬದಾಗಿದೆ. ಇದಕ್ಕಿರುವ ವೆಚ್ಚಗಳನ್ನು ತೀರಿಸಲು ತಂದೆಯನ್ನು ತನ್ನ ಮಕ್ಕಳನ್ನು ತನ್ನ ಸಂಪಾದನೆಯ ದಶಮಾಂಶವನ್ನು ಕೊಡಬೇಕೆಂದು ಕೇಳುತ್ತಾನೆ. ಇದು ನಮ್ಮ ದಶಮಾಂಶವಾಗಿದೆ ಅಂದರೆ ಹತ್ತರಲ್ಲೊಂದು ಪಾಲು. ಈ ಹಣವನ್ನು ಕೊಟ್ಟು ನಡಿಸುವ ಕೋಣೆಯ ಬಾಡಿಗೆಗಾಗಿ, ಸಭೆ ಕಟ್ಟಲು, ಪೂರ್ಣಾವಧಿಯಾಗಿ ದೇವರ ಕೆಲಸವನ್ನು ಮಾಡುವ ಬೋಧಕರಿಗೆ ಸಹಾಯ ಮಾಡುವುದಕ್ಕಾಗಿ ಮತ್ತು ವಿದ್ಯುಚ್ಛಕ್ತಿಯ, ನೀರಿನ ಮತ್ತು ಸಭೆಯ ಪಾಲನೆಯ ವೆಚ್ಚಗಳಿಗಾಗಿ ವಿನಿಯೋಗಿಸಲಾಗುವುದು. ನಮ್ಮ ಕಾಣಿಕೆಗಳು ಸುವಾರ್ತೆಯನ್ನು ರೇಡಿಯೋ, ಸಾಹಿತ್ಯ, ಪಾಠಮಾಲೆಗಳ ಮೂಲಕ, ಲೋಕದಲ್ಲೆಲ್ಲಾ ಹರಡಲು ಮತ್ತು ಇತರರನ್ನು ಕಳುಹಿಸಲು ಸಹಾಯವಾಗುವುದು.

**ನೀವು ಮಾಡಬೇಕಾದದ್ದು**

15. ದಶಮಾಂಶಗಳನ್ನು ಕೊಡುವುದೆಂದರೆ

...ಅ) ನಿಮ್ಮ ಸಂಪಾದನೆಯಲ್ಲಿ ಹತ್ತರಲ್ಲೊಂದು ಪಾಲು ದೇವರಿಗೆ ಕೊಡುವುದು.

...ಆ) ನಿಮ್ಮ ಆಸ್ತಿಯ ಹತ್ತರಲ್ಲೊಂದು ಪಾಲು ದೇವರಿಗೆ ಕೊಡುವುದು.

...ಇ) ನಿಮ್ಮ ಸಂಪಾದನೆಯಲ್ಲಿ ಹತ್ತರಲ್ಲಿ ನಾಲ್ಕು ಪಾಲು ಕೊಡುವುದು

ಉತ್ತರ : 15ಅ) ನಿಮ್ಮ ಸಂಪಾದನೆಯಲ್ಲಿ ಹತ್ತರಲ್ಲೊಂದು ಪಾಲು ದೇವರಿಗೆ ಕೊಡುವುದು.



ನಿಮ್ಮ ದಶಮಾಂಶಗಳು ಮತ್ತು ಕಾಣಿಕೆಗಳು ದೇವರಿಗೆ ಮಾಡುವ ಆರಾಧನೆಯಲ್ಲಿ ಒಂದು ಭಾಗವಾಗಿದೆ. ದೇವರಿಗೆ ನಿನ್ನೆಲ್ಲಾ ಆಶೀರ್ವಾದಗಳಿಗಾಗಿ ನಿನಗೆ ಸ್ತೋತ್ರ ಎಂದು ಹೇಳಿದ ಹಾಗೆ ಆಗುತ್ತದೆ. ಲೋಕವನ್ನು ಸುವಾರ್ತಮಯ ಮಾಡುವ ಆತನ ಈ ಶ್ರೇಷ್ಟ ಕಾರ್ಯದಲ್ಲಿ ಇವು ನಿಮ್ಮನ್ನು ಪಾಲುಗಾರರನ್ನಾಗಿ ಮಾಡುತ್ತವೆ.

ದೇವರು ನಿಮಗೆ ಕೆಲಸ ಮಾಡಲು ಬಲವನ್ನು ಕೊಡುತ್ತಾನೆ, ಮತ್ತು ನೀವು ಹತ್ತರಲ್ಲೊಂದು ಭಾಗವನ್ನು ಆತನಿಗೆ ಕೊಡುತ್ತೀರಿ, ಆ ತಾಸಿನಲ್ಲಿ ನೀವು ಸಂಪಾದಿಸಿದ್ದು ಸಭೆಯು ಸುವಾರ್ತೆಯನ್ನು ಸಾರುವುದಕ್ಕೆ ಸಹಾಯವಾಗುತ್ತದೆ. ಆದುದರಿಂದ ನಿಮ್ಮ ದಶಮಾಂಶಗಳ ಮುಖಾಂತರ ನೀವು ಸುವಾರ್ತೆಯನ್ನು ಸಾರುತ್ತಿದ್ದೀರಿ.

ನಿಮ್ಮ ಕೊಡುವಿಕೆಯು ಮೂರು ತರಹದ ಆಶೀರ್ವಾದಗಳನ್ನು ತರುತ್ತವೆ.

ಆತ್ಮೀಕ ಆಶೀರ್ವಾದ

ತೃಪ್ತಿ ದೇವರ ಕುಟುಂಬದಲ್ಲಿ ನೀವು ಜವಾಬ್ದಾರಿಕೆಯನ್ನು ಹೊರುವ ಒಬ್ಬ ಆಧಾರವುಳ್ಳ ಸದಸ್ಯರಾಗಲು ನೀವು ಸಂತೋಷಿಸುತ್ತೀರಿ.

ಉನ್ನತಿ, ನೀವು ದೇವರಿಗೆ ಮಿತಿಮೀರಿ ಕೊಡಲಾರಿರಿ. ಆತನು ದಶಮಾಂಶ ಕೊಡುವವರನ್ನು ಉನ್ನತಿಪಡಿಸುತ್ತಾನೆ. ಇದು ತಮ್ಮ ಅನುಭವವಾಗಿದೆಯೆಂದು ಸಾವಿರಾರು ಶಿಷ್ಯರು ನಿಮಗೆ ಹೇಳಬಲ್ಲರು.

ಮಲಾಕಿ 3:10 ನನ್ನ ಆಲಯವು ದಶಮಾಂಶವಲ್ಲ ಆಹಾರ ಶೂನ್ಯವಾಗದಂತೆ ಯಾವಾಗಲೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ; ನಾನು ಪರಲೋಕದ ದ್ವಾರಗಳನ್ನು ತೆರೆದು ನಿಮ್ಮಲ್ಲಿ ಸ್ಥಳಹಿಡಿಯಲಾರದಷ್ಟು ಸುವರವನ್ನು ಸುರಿಯುವೆನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ.

2 ಕೊರಿಂಥದವರಿಗೆ 9:7 ಸಂತೋಷವಾಗಿ ಕೊಡುವವನು ಮೇಲೆ ದೇವರಿಗೆ ಪ್ರೀತಿಯುಂಟು.

### ನೀವು ಮಾಡಬೇಕಾದದ್ದು

16. ದೇವರು ಭೌತಿಕವಾಗಿ ಉನ್ನತಿಪಡಿಸುವನೆಂದು ವಾಗ್ದಾನ ಮಾಡಿದ್ದು ಯಾರಿಗೆಂದರೆ

...ಅ) ಯಾರು ತಮ್ಮ ಪ್ರತಿ ಚಿಕ್ಕಾಸನ್ನು ಕೊಡಿಸಿಬಿಡುವರೋ

...ಆ) ಯಾರು ದಶಮಾಂಶಗಳನ್ನು ಕೊಡುತ್ತಾರೋ

17. ಮಲಾಕಿ 3:10 ಬಾಯಿಪಾಠ ಮಾಡಿರಿ

ಉತ್ತರ : 6 ಆ) ಯಾರು ದಶಮಾಂಶಗಳನ್ನು ಕೊಡುತ್ತಾರೋ

## ನಿಮಗೆ ಸಾಧ್ಯವಾಗುವ ಹಾಗೆ ಸಹಾಯ ಮಾಡುವುದು

ನೀವು ಕರ್ತನಿಗಾಗಿ ಯಾವ ಕೆಲಸ ಮಾಡಿದರೂ ನೀವು ಆತ್ಮೀಕವಾಗಿ ಬೆಳೆಯುತ್ತೀರಿ. ಸಭೆಯ ಕಸಗುಡಿಸುವುದರಿಂದ ಹಿಡಿದುಕೊಂಡು ನಿಮ್ಮ ಪಕ್ಕದ ಮನೆಯಲ್ಲಾಗಲಿ ಇಲ್ಲವೆ ಮನೆಯಲ್ಲಿ ಭಾನುವಾರ ಶಾಲೆಯ ಕೂಟಗಳನ್ನು ನಡೆಸುವಷ್ಟರವರೆಗೂ. ಕರ್ತನಿಗಾಗಿ ನೀವು ಮಾಡಬೇಕಾದುದ್ದರ ಕುರಿತು ನಿಮ್ಮ ಬೋಧಕರನ್ನು ಕೇಳಿರಿ.

### ನೀವು ಮಾಡಬೇಕಾದದ್ದು

18. ಶಿಷ್ಯನು ಮಾಡಬೇಕಾದದ್ದು

...ಅ) ತನಗೆ ಸಾಧ್ಯವಿರುವ ಮಟ್ಟಿಗೆ ಸೇವೆಗೆ ತಾನು ಸಹಾಯ ಮಾಡಬಲ್ಲೆನೆಂದು ಬೋಧಕರಿಗೆ ಒಪ್ಪಿಸಿಕೊಡುವುದು.

...ಆ) ಬೋಧಕರು ಸಹಾಯ ಕೇಳುವವರೆಗೆ ಕಾಯುವುದು

**ಉತ್ತರ** : 18ಅ) ತನಗೆ ಸಾಧ್ಯವಿರುವ ಮಟ್ಟಿಗೆ ಸೇವೆಗೆ ತಾನು ಸಹಾಯ ಮಾಡಬಲ್ಲೆನೆಂದು ಬೋಧಕರಿಗೆ ಒಪ್ಪಿಸಿಕೊಡುವುದು.

## ಸಭಾ ಸಂಘಟನೆಯಲ್ಲಿ ಪಾಲುಗೊಳ್ಳುವಿಕೆ

ಸಭೆಯಲ್ಲಿ ಅನೇಕ ವಿಭಾಗಗಳಿರುತ್ತವೆ. ಸತ್ಯವೇದದ ಪಾಠಗಳು

ಪ್ರತಿಯೊಬ್ಬರಿಗೂ ಇರುತ್ತವೆ. ಅಂತಹ ಪಾಠಗಳನ್ನು ನಡೆಸುವ ಒಂದು ವರ್ಗದಲ್ಲಿ ನೀವು ನಂಬಿಗಸ್ತ ಸದಸ್ಯರಾಗಿ ದೇವರ ವಾಕ್ಯವನ್ನು ಕ್ರಮವಾಗಿ ಕಲಿಯಿರಿ. ಈ ಅವಕಾಶ ಕಳೆದುಕೊಳ್ಳದಿರಿ. ಪುರುಷರು, ಸ್ತ್ರೀಯರು, ಯುವಕರು ಮತ್ತು ಮಕ್ಕಳಿಗೆಲ್ಲಾ ಪ್ರತ್ಯೇಕ ವಿಭಾಗಗಳಿರುತ್ತವೆ. ಅವರು ತಮ್ಮ ಕೂಡಿ ಬರೋಣದಲ್ಲಿ ಕರ್ತನನ್ನು ಆರಾಧಿಸುತ್ತಾರೆ ಮತ್ತು ಆತನಿಗಾಗಿ ವಿಧವಿಧದ ಯೋಜನೆಗಳನ್ನು ನಿರ್ವಹಿಸುತ್ತಾರೆ. ಈ ಗುಂಪುಗಳೊಂದರಲ್ಲಿ ಭಾಗ ತೆಗೆದುಕೊಳ್ಳಿರಿ. ನೀವು ಸಂತೋಷವಾಗಿ ಸ್ವೀಕರಿಸಲ್ಪಟ್ಟು ಅದರ ಕಾರ್ಯಚಟುವಟಿಕೆಗಳಲ್ಲಿ ಹರ್ಷಿಸುತ್ತೀರಿ. ಈ ಗುಂಪುಗಳು ಅಗತ್ಯದಲ್ಲಿರುವವರಿಗೆ ಸಂಧಿಸಲು, ಬೋಧಿಸಲು ಮತ್ತು ಸಹಾಯ ಮಾಡಲು ಪ್ರಯತ್ನಿಸುತ್ತದೆ. ಒಬ್ಬ ವ್ಯಕ್ತಿಯು ಹೆಚ್ಚಿನದನ್ನು ಮಾಡಲಾರ, ದೇವರು ಈ ಲೋಕದಲ್ಲಿ ತನ ಕಾರ್ಯ ನಿರ್ವಹಣೆಯನ್ನು ಮುಂದುವರಿಸುವಲ್ಲಿ ತನ್ನ ಮಕ್ಕಳ ಸಂಘಟಿತ ಶಕ್ತಿಗಳ ಮುಖಾಂತರ ಕೆಲಸ ಮಾಡುತ್ತಿದ್ದಾನೆ.

### ನೀವು ಮಾಡಬೇಕಾದದ್ದು

19. ನೀವು ಸಭೆಯಲ್ಲಿ ಯಾವ ಸಂಸ್ಥೆಗಾದರೂ ಸಂಬಂಧಿಸಲ್ಪಟ್ಟಿದ್ದೀರೋ?.

........................................................................................

ಇಲ್ಲದಿದ್ದರೆ, ನಿಮಗೆ ಒಬ್ಬ ಸದಸ್ಯನಾಗಲು ಇಷ್ಟ ಉಂಟೋ?

.............ಯಾವ ಗುಂಪಿಗಾಗಿ.........................................

## ಮಿತಿಮೀರಿದ ಕಾರ್ಯಚಟುವಟಿಕೆಗಳು?

ನಿಮಗೆ ಇತರ ಜನರಷ್ಟು ಈ ಕಾರ್ಯಚಟುವಟಿಕೆಗಳಲ್ಲಿ ಸಮಯ ಕಳೆಯಲು ಆಗದಿದ್ದರೆ ನೀವು ಅದರ ಕುರಿತು ಚಿಂತಿಸದಿರಿ. ಕರ್ತನಿಗೆ ಅದರ ಕುರಿತು ಎಲ್ಲ ಗೊತ್ತುಂಟು ಮತ್ತು ನೀವು ಮಾಡಬೇಕಾದುದ್ದರ ಕುರಿತು ನಮಗೆ ಆತನು ಸಹಾಯ ಮಾಡುತ್ತಾನೆ.

ನೀವು ಹೊಸ ಜೀವಿತದ ಈ ಕಾರ್ಯಚಟುವಟಿಕೆಗಳಲ್ಲಿ ಸಂತೋಷಿಸುತ್ತೀರಿ. ನೀವು ಇತರರು ನಿತ್ಯದಂಡನೆಯಿಂದ ತಪ್ಪಿಸಿಕಂಡು ನಿತ್ಯಜೀವವನ್ನು ಕಂಡುಕೊಳ್ಳುವಂತೆ ಸಹಾಯ ಮಾಡುವ ಕಾರ್ಯದಿಂದ ನಿಮಗೆ ತೃಪ್ತಿ ಉಂಟಾಗುತ್ತದೆ. ಈಗ ನೀವು ಕರ್ತನಿಗಾಗಿ ಮಾಡುವ ಪ್ರತಿಕಾರ್ಯಕ್ಕೂ ಆತನು ಬರುವ ಲೋಕದಲ್ಲಿ ನಿಮಗೆ ಅಮೂಲ್ಯವಾದ ಬಹುಮಾನ ಕೊಡುತ್ತಾನೆ.